**Publication:** Vijayavani Kannada Daily
**Date:** 07/08/2016
**Edition:** Bengaluru
**Page No:** 3
**Headline:** Presidency school students win TCS 'IT Wiz' regional edition

# ಪ್ರೆಸಿಡೆನ್ಸಿ ಶಾಲೆಗೆ ಟಿಸಿಎಸ್ ಕ್ವಿಜ್ ಪ್ರಶಸ್ತಿ

## ಅಂತರಶಾಲಾ ಐಟಿ ರಸಪ್ರಶ್ನೆ ಸ್ಪರ್ಧೆ » ವಿಜೇತರಿಗೆ ಐಪಾಡ್ ವಿತರಣೆ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಭಾರತದ ಅತ್ಯಂತ ದೊಡ್ಡ ಅಂತರಶಾಲಾ ಕ್ವಿಜ್ ಆಗಿರುವ ಟಿಸಿಎಸ್ 'ಐಟಿ ವಿಜ್ಜ್'ನಲ್ಲಿ ಪ್ರೆಸಿಡೆನ್ಸಿ ಶಾಲೆ ವಿದ್ಯಾರ್ಥಿ ಸಮಂತ್ ಡಿ. ರಾಜು ಮತ್ತು ಕೆ.ಎಸ್. ಸುಕೇತ್ ಪ್ರಥಮ ಸ್ಥಾನ ಗಳಿಸಿದ್ದಾರೆ. ಕುಮಾರನ್ಸ್ ಚಿಲ್ಡ್ರನ್ ಹೋಮ್ ಶಾಲೆಯ ವಲ್ಲಭ ರಮಾಕಾಂತ್ ಮತ್ತು ಮೋಹಿತ್ ದೋಶಿ ದ್ವಿತೀಯ ಸ್ಥಾನಗಳಿಸಿದ್ದಾರೆ.

**ಚೌಡಯ್ಯ ಸ್ಮಾರಕ ಭವನದಲ್ಲಿ ಬಹುಮಾನ ವಿತರಣೆ**

ಈ ಸ್ಪರ್ಧೆಯ ಪ್ರಶಸ್ತಿ ವಿತರಣಾ ಸಮಾರಂಭ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಿತು. ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ನಗರ ಹೆಚ್ಚುವರಿ ಪೊಲೀಸ್ ಆಯುಕ್ತ (ಸಂಚಾರ) ಆರ್. ಹಿತೇಂದ್ರ ಮತ್ತು ಟಿಸಿಎಸ್ ಹೈಟೆಕ್ ಇಂಡಸ್ಟ್ರಿ ಸಲ್ಯೂಷನ್ಸ್ ಯೂನಿಟ್‌ನ ಜಾಗತಿಕ ಮುಖ್ಯಸ್ಥ ನಾಗರಾಜ್ ಇಜಾರಿ ಬಹುಮಾನವಾಗಿ ಐ ಪಾಡ್ ವಿತರಿಸಿದರು. ದೇಶದ ಖ್ಯಾತ ಕ್ವಿಜ್ ಮಾಸ್ಟರ್ ಎನಿಸಿರುವ ಬಾಲಸುಬ್ರಮಣ್ಯನ್ ಕ್ವಿಜ್ ನಡೆಸಿಕೊಟ್ಟರು.

ನಗರದ ಹಲವು ಶಾಲೆಗಳ ಸಾವಿರ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಇದರೊಂದಿಗೆ ವರ್ಣರಂಜಿತ ಟ್ರೋಫಿ ಮತ್ತು ಪದಕಗಳನ್ನೂ ಬಹುಮಾನ ವಿಜೇತರಿಗೆ ವಿತರಿಸಲಾಯಿತು. ಫೈನಲ್‌ಗೆ ಅರ್ಹತೆ ಪಡೆದಿದ್ದ ಎಲ್ಲ 6 ತಂಡಗಳ ಸದಸ್ಯರಿಗೆ ಟಿಸಿಎಸ್ ವತಿಯಿಂದ ಸ್ಪೇಸ್ ಪ್ಯಾಕ್, ಸೆಲ್ಫಿ ಸ್ಟಿಕ್, ಇಯರ್‌ಫೋನ್, ಬ್ಲೂಟೂತ್ ಸ್ಪೀಕರ್‌ಗಳು ಮತ್ತು ಪೆನ್‌ಡ್ರೈವ್‌ಗಳನ್ನು ಬಹುಮಾನವಾಗಿ ನೀಡಲಾಯಿತು.




ಪ್ರೆಸಿಡೆನ್ಸಿ ಶಾಲೆ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು.